ದಿನಾಂಕಃ 01.02.2020 ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

ಮು. ಪಾಟೀಸವಾಲುಃ ವಾದಿ ಪರ ಶ್ರೀ ಐ.ಎಸ್.ಡಿ ವಕೀಲರಿಂದಃ

32. ಸಾಕ್ಷಿಗೆ ಈಗ ಮೆಮೋರಾಂಡಮ್ ಆಫ್ ಡೆಪಾಸಿಟ್ ಆಫ್ ಟೈಟಲ್ ಡೀಡ್‌ನ ದೃಢೀಕೃತ ದಾಖಲೆಯನ್ನು ತೋರಿಸಲಾಗಿ, ಅದನ್ನು ಸಾಕ್ಷಿ ನೋಡಿ ಒಪ್ಪಿದ್ದು, ಅದನ್ನು ನಿ.ಪಿ. 20 ಎಂದು ಗುರ್ತಿಸಲಾಯಿತು. ನಾನು ಈ ಆಸ್ತಿಯನ್ನು ಒತ್ತೆ ಇಟ್ಟು 8,80,000/- ರೂ. ಸಾಲ ಪಡೆದಿರುತ್ತೇನೆ ಎಂದರೆ ನಿಜ.

33. ಸಾಕ್ಷಿಗೆ ಈಗ ದಿಃ 21.03.2009 ರ ನೊಂದಾಯಿತ ಖರೀದಿ ಪತ್ರದ ದೃಢೀಕೃತ ನಕಲನ್ನು ತೋರಿಸಲಾಗಿ ಅದೇ ಕ್ರಯಪತ್ರದಡಿ ಎನ್.ಕೆ. ನಾಗೇಂದ್ರ ಅವರಿಗೆ ಆಸ್ತಿಯನ್ನು ಮಾರಿರುವುದಾಗಿ ಒಪ್ಪಿರುವುದರಿಂದ ಅದನ್ನು ಪ್ರತಿವಾದಿ ಪರ ವಕೀಲರ ತಕರಾರಿಗೆ ಒಳಪಟ್ಟು ಇದನ್ನು ನಿ.ಪಿ. 21 ಎಂದು ಗುರ್ತಿಸಲಾಯಿತು.

34. ನಿ.ಪಿ. 21 ರಡಿ ಮಾರಾಟ ಮಾಡಿ ಬಂದ ಹಣವನ್ನು ಕರ್ನಾಟಕ ರಾಜ್ಯ ಕೈಗಾರಿಕಾ ಸಹಕಾರ ಬ್ಯಾಂಕ್ ನಿಯಮಿತ ಕೋಲಾರ ಇವರಿಗೆ ಕಟ್ಟಿ ರಸೀದಿಯನ್ನು ಪಡೆದಿರುತ್ತೇನೆ ಎಂದರೆ ಸರಿಯಲ್ಲ. ನಿ.ಪಿ. 21 ರಲ್ಲಿ ನನ್ನ ಗೃಹಕೃತ್ಯ ಹಣದ ಜರೂರಾತಿ ಸಲುವಾಗಿ ಶುದ್ಧ ಕ್ರಯ ಮಾಡುವುದಾಗಿ ಬರೆಯಲಾಗಿದೆ ಎಂದರೆ ಸಾಮಾನ್ಯವಾಗಿ ಎಲ್ಲಾ ಕ್ರಯ ಪತ್ರದಲ್ಲಿ ಇದೇ ರೀತಿ ಬರೆಯುತ್ತಾರೆ ಎಂದು ಹೇಳುತ್ತಾರೆ. ನಿ.ಪಿ. 21 ರಲ್ಲಿ ಬರೆದ ಅಂಶಗಳು ತಪ್ಪು ಇರುವುದಿಲ್ಲ.

35. ಸಾಕ್ಷಿಗೆ ಈಗ ದಿಃ 12.02.2009 ರ ಹಣ ಸಂದಾಯ ರಸೀದಿಯ ದೃಢೀಕೃತ ನಕಲನ್ನು ನೋಡಿ ಒಪ್ಪಿಕೊಂಡಿದ್ದು, ಅದನ್ನು ನಿ.ಪಿ. 22 ಎಂದು ಗುರ್ತಿಸಲಾಯಿತು. ನಾನು ನಿ.ಪಿ. 22 ರ ಬ್ಯಾಂಕಿನಲ್ಲಿ ವ್ಯಾಪಾರ ಸಾಲವನ್ನು

ಮಾಡಿದ್ದೆ ಎಂದರೆ ನಿಜ. ಸಾಕ್ಷಿಗೆ ಈಗ ನಿ.ಪಿ. 22 ರಲ್ಲಿ ಶ್ರೀ ಎಂ.ಆರ್. ಪಾರ್ಥಸಾರತಿ ಇವರ ಪತ್ರ ದಿಃ 18.08.2008 ರಲ್ಲಿ ಒಟ್ಟು ಅಡಮಾನ ಮಾಡಿದ ಸ್ಥಿರಾಸ್ತಿ 50 ಇಂಟು 60 ಮತ್ತು ಮತ್ತು 50 ಇಂಟು 20 ರ ಪೈಕಿ 50 ಇಂಟು 30 ಅಡಿಗಳ ಉತ್ತರ ಭಾಗದ ಆಸ್ತಿಯನ್ನು ಬಿಟ್ಟುಕೊಡಲು ಹಾಗೂ ಹಣ ಎಷ್ಟು ತುಂಬಬೇಕು ಎಂದು ಕೇಳಿಕೊಂಡಿದ್ದರು ಎಂದು ಓದಿ ಹೇಳಲಾಗಿ ಸಾಕ್ಷಿ ಅದನ್ನು ಸುಳ್ಳು ಎಂದು ಹೇಳುತ್ತಾರೆ. ನಿ.ಪಿ. 22 ರಲ್ಲಿರುವ ಅಂಶಗಳು ತಪ್ಪು ಇರುತ್ತದೆ. ನಿ.ಪಿ. 22 ತಪ್ಪು ಇದೆ ಎಂದು ಹೇಳಿ ಅದನ್ನು ನಾನು ತಿರಸ್ಕರಿಸಲಿಲ್ಲವಾ ಎಂದರೆ ನಿ.ಪಿ. 22 ನ್ನು ನಾನು ಈಗಲೇ ನೋಡುತ್ತಿದ್ದೇನೆ ಎಂದು ಹೇಳುತ್ತಿದ್ದಾರೆ.

36. ನಿ.ಪಿ. 21 ಮತ್ತು 22 ಒಂದರ ನಂತರ ಒಂದು ಆಗಿರುತ್ತದೆ ಎಂದರೆ ನಿಜ. ನಾನು ಶ್ರೀನಿವಾಸಯ್ಯ ಸಹಿ ಮಾಡುವುದನ್ನು ತಿಳಿದುಕೊಂಡಿರುವುದಿಲ್ಲ. ಶ್ರೀನಿವಾಸಯ್ಯ ಅವರು ಹೇಗೆ ಸಹಿ ಮಾಡುತ್ತಾರೆ ಎಂಬ ಕಲ್ಪನೆಯು ಸಹ ನನಗೆ ಇರುವುದಿಲ್ಲ. ಶ್ರೀನಿವಾಸಯ್ಯ ಅವರು ನನ್ನ ಮುಂದೆ ಸಹಿಗಳನ್ನು ಮಾಡಿದ್ದು, ಆದರೆ ನಾನು ಆ ಸಹಿಗಳಿಗೆ ಗಮನ ಕೊಟ್ಟಿಲ್ಲ. ಶ್ರೀನಿವಾಸಯ್ಯ ಅವರು 2004 ರಲ್ಲಿ ಮತ್ತು ಚೆಕ್ಕುಗಳನ್ನು ಬರೆಯುವಾಗ ನನ್ನ ಮುಂದೆ ಸಹಿ ಮಾಡುತ್ತಿದ್ದರು. 2009 ರಲ್ಲಿ ಶ್ರೀನಿವಾಸಯ್ಯ ಅವರು ತೀರಿಕೊಂಡಿದ್ದರಿಂದ ಈಗ ಅವರ ಸಹಿ ನನಗೆ ಮರೆತು ಹೋಗಿರುತ್ತದೆ ಎಂದರೆ ನಾನು ಅವರ ಸಹಿಗಳಿಗೆ ಗಮನ ಕೊಟ್ಟಿಲ್ಲ ಎಂದು ಹೇಳುತ್ತಾರೆ.

37. ನಾನು ಮತ್ತು ಶ್ರೀನಿವಾಸಯ್ಯ ಅವರು ಒಂದೇ ದಾಖಲಾತಿಗೆ ಒಂದೇ ಸಮಯದಲ್ಲಿ ಸಹಿ ಮಾಡಿರುತ್ತೇವೆ. ಆ ಸಮಯದಲ್ಲಿ ಶ್ರೀನಿವಾಸಯ್ಯ ಅವರು ಸಹಿ ಮಾಡಿದ್ದು ಗೊತ್ತಿದ್ದು, ಅವರು ಹೇಗೆ ಮಾಡಿರುತ್ತಾರೆ ಗೊತ್ತಿರುವುದಿಲ್ಲ.

ನಾನು ಶ್ರೀನಿವಾಸಯ್ಯ ಅವರ ಸಹಿಯನ್ನು ನೋಡಿದರೆ ನಿಖರವಾಗಿ ಗುರ್ತಿಸಲು ಆಗುವುದಿಲ್ಲ.

38. ನನ್ನ ಸಹೋದರಿ ಪಾರ್ವತಮ್ಮ ಅವರಿಗೆ ವಿದ್ಯಾಭ್ಯಾಸ ಇರಲಿಲ್ಲ ಎಂದರೆ ಕನ್ನಡವನ್ನು ಚೆನ್ನಾಗಿ ಓದುತ್ತಿದ್ದರು ಎಂದು ಹೇಳುತ್ತಾರೆ. ಪಾರ್ವತಮ್ಮ ಅವರು 2ನೇ ತರಗತಿವರೆಗೆ ಓದಿರುತ್ತಾರೆ ಎಂದರೆ ಗೊತ್ತಿಲ್ಲ. ಪಾರ್ವತಮ್ಮ ಅವರು ಅನಕ್ಷರಸ್ತೆ ತರಹ ಸಹಿ ಮಾಡುತ್ತಾರೆ ಎಂದರೆ ಅವರು ಯಾವಾಗಲಾದರೂ ಒಮ್ಮೆ ಸಹಿ ಮಾಡುವುದರಿಂದ ಅನಸ್ತರಕ್ಷೆ ತರಹ ಸಹಿ ಮಾಡುತ್ತಾರೆ ಎಂದು ಹೇಳುತ್ತಾರೆ. ಪಾರ್ವತಮ್ಮ ಅವರ ಸಹಿ ದುಂಡಾದ ಅಕ್ಷರದಲ್ಲಿಲ್ಲ ಎಂದರೆ ನಿಜ. ಪಾರ್ವತಮ್ಮ ಅವರು ಕಷ್ಟಪಟ್ಟು ಸಹಿ ಮಾಡುವುದನ್ನು ಕಲಿತು ಸಹಿ ಮಾಡಿದ ತರಹ ಅವರ ಸಹಿ ಇರುತ್ತದೆ ಎಂದರೆ ಸರಿಯಲ್ಲ. ಪಾರ್ವತಮ್ಮ ಅವರು ಒಂದೊಂದು ಅಕ್ಷರವನ್ನು ಸೇರಿಸಿ ಓದಲು ಕಷ್ಟ ಪಡುತ್ತಿದ್ದರು ಎಂದರೆ ಸರಿಯಲ್ಲ. ಪಾರ್ವತಮ್ಮ ಅವರು ಕನ್ನಡ ಭಾಷೆಯ ಒಂದು ವಾಕ್ಯವನ್ನು ಓದಲು 20 ನಿಮಿಷ ಬೇಕಾಗುತ್ತಿತ್ತು ಎಂದರೆ ಸರಿಯಲ್ಲ.

39. ಪಾರ್ವತಮ್ಮ ಅವರಿಗೆ ಬರೆಯಲು ಬರುವುದಿಲ್ಲ ಎಂದು ಹೇಳಿ ಅವರು ಬಾಡಿಗೆ ಕೊಟ್ಟಿದ್ದರೂ ಸಹ ಕರಾರು ಪತ್ರ ಬರೆಯುತ್ತಿರಲಿಲ್ಲ ಎಂದರೆ ಸರಿಯಲ್ಲ. ಪಾರ್ವತಮ್ಮ ಅವರು ಪ್ರತಿ ತಿಂಗಳು ಬಾಡಿಗೆಯನ್ನು ನಮೂದಿಸಿಕೊಳ್ಳಲು ಅವರು ಒಂದು ಪುಸ್ತಕವನ್ನು ಇಟ್ಟಿದ್ದರು ಎಂದರೆ ಗೊತ್ತಿಲ್ಲ.

40. ನಾನು ವಾದಿಯ ಸಹಿಯನ್ನು ಇದುವರೆಗೂ ನೋಡಿರುವುದಿಲ್ಲ. ನಾನು ವಾದ ಪತ್ರದಲ್ಲಿರುವ ವಾದಿಯ ಸಹಿಯನ್ನು ನಾನು ನೋಡಿಲ್ಲ, ಕಾರಣ ಅದನ್ನು ನ್ಯಾಯಾಲಯಕ್ಕೆ ಕೊಟ್ಟಿರುತ್ತಾರೆ. ನಾನು ವಾದ ಪತ್ರವನ್ನು ನೋಡಿದರೆ

ವಾದಿಯ ಸಹಿಯನ್ನು ನಿಖರವಾಗಿ ಗುರ್ತಿಸಲು ಆಗುವುದಿಲ್ಲ, ಕಾರಣ ಅಷ್ಟೊಂದು ಗಮನವಿಟ್ಟು ನೋಡಿರುವುದಿಲ್ಲ. ನಾನು ವಾದಿಯ ಮುಖ್ಯ ವಿಚಾರಣೆಯ ಪತ್ರ ಮತ್ತು ಅದರಲ್ಲಿರುವ ವಾದಿಯ ಸಹಿಯನ್ನು ನೋಡಿರುವುದಿಲ್ಲ. ನಾನು ವಾದಿಯ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಮತ್ತು ಅವರ ಸಹಿಯನ್ನು ನೋಡದೇ ಸಾಕ್ಷ್ಯ ಕೊಡುತ್ತಿದ್ದೇನೆ ಎಂದರೆ ಮುಖ್ಯ ವಿಚಾರಣೆಯ ಅಂಶಗಳು ಗೊತ್ತಿವೆ ಎಂದು ಹೇಳುತ್ತಾರೆ.

ಮುಂದುವರೆದ ಪಾಟೀ ಸವಾಲಿಗೆ ಸಮಯವನ್ನು ಕೋರಿದ್ದು ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇದೆ

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು
ಹಾಗೂ ಜೆಎಂಎಫ್‌ಸಿ, ಚಿಂತಾಮಣಿ.